## ಕಥೆ

ಬಲೆ ಅವರ ಬಣ್ಣ ಹೊಡೆಸಿಕೊಂಡಿರುವ ಕರಿ ತಲೆಗೆ ಸುತ್ತಿಕೊಂಡು ಒಂದೇ ಏಟಿಗೆ ಬಿಳಿ ತಲೆ ಮಾಡಿಬಿಟ್ಟಿತು. 'ತಥ್' ಅಂತ ಕೈನಲ್ಲಿ ಒಂದಿಷ್ಟ ಕಿತ್ತಾಕಿದರಾದರೂ ಮುಂದೆ ಇನ್ನೂ ಕವ್ಕಂಡಿರದು ಕಾಣಿಸಿತು. ಮಕ್ಕಳು ಓಡಾಡುವ ಮಟ್ಟಕ್ಕೆ ಜೇಡ ಕಟ್ಟಿದಂತಿರಲಿಲ್ಲ ಅಥವಾ ಮಕ್ಕಳು ಓಡಾಡಿ ಅವರ ತಲೆ ಮಟ್ಟಕ್ಕೆ ಇಲ್ಲವಾಗಿಸಿದ್ದರೇನೊ. ಆದರೆ, ಎತ್ತರದ ಮೇಷ್ಟ್ರು ಮೊದಲ ಬಾರಿಗೆ ನುಗ್ಗಿದಾಗ ತಲೆಗೆ ಸುತ್ತಿಕೊಳ್ಳುವುದು ನ್ಯಾಯವೇ ಆಗಿತ್ತು. ಹೇಗೊ ಮೇಷ್ಟ್ರು ಬಿಡಿಸಿಕೊಂಡು ಮುಂದಿದ್ದ ಟಾಯ್ಲೆಟ್ ಬೇಷಿನ್‌ನತ್ತ ಪಾದ ಬೆಳಸಿದರು. ಅಲ್ಲಿ ನೀರು ಕಾಣದ ಶೌಚಾಲಯ ಕರ್‍ರಗೆ ಕಿಲುಬುಗಟ್ಟಿತ್ತು. ಎಲ್ಲಕ್ಕಿಂತ ಮೇಲಾಗಿ ಗಬ್ಬು ವಾಸನೆ ಮೂಗಿಗೆ ರಾಚಿತು. ಮೇಷ್ಟ್ರಿಗೆ ಮಕ್ಕಳು ಬಳಸಿರುವ ಶೌಚಾಲಯವಾದ್ದರಿಂದ ವಾಸನೆ ಒಂದಿಷ್ಟು ಸಹ್ಯವೆನಿಸಿ, ದೊಡ್ಡವರದ್ದಾಗಿದ್ದರೆ ಏನ್ಗತಿ ಎಂದುಕೊಂಡರು. ನಲ್ಲಿಯನ್ನು ಕೈಯಿಕ್ಕಿ ತಿರುಗಿಸಿ ನೋಡಿದರೆ ನೀರಾಡದೆ ಅದು ಸುಲಭಕ್ಕೆ ತಿರುಗುವುದೂ ಕಷ್ಟವಾಗಿತ್ತು. ಹೀಗೆ ಆದರೆ ನಾನು ಹೊಸ ಸಾಹೇಬ್ರು ಕೈಲಿ ಇಂದೇ ಸಸ್ಪೆಂಡ್ ಆಗುವುದು ಗ್ಯಾರಂಟಿ ಎಂಬುದು ಮನವರಿಕೆಯಾಗಿ ತಕ್ಷಣವೇ ವಾಟರ್ ಮ್ಯಾನ್ ನಾಗರಾಜನಿಗೆ ಫೋನ್ ಮಾಡಿ ಈ ಕೂಡಲೆ ನೀರು ಬಿಡಬೇಕೆಂದು ತಾಕೀತು ಮಾಡಿದರು. ಆತ ನೀರು ಬಿಡೋದ್ರೊಳಗೆ ಮೇಲಿನ ಸಿಂಟೆಕ್ಸಿನಿಂದ ನೀರು ಸರಾಗವಾಗಿ ಇಳಿಯುತ್ತೊ ಇಲ್ವೊ ಚಕ್ ಮಾಡನ ಅಂತ ಸಿಂಟೆಕ್ಸಿನಿಂದ ಇಳಿದಿರುವ ಪೈಪ್ನ ಒಮ್ಮೆ ಹಿಂದಕ್ಕೋಗಿ ಪರೀಕ್ಷಿಸಿದರು. ಆ ಪೈಪ್ ತಿರುವಿನ ಜಾಗದಲ್ಲಿ ಕಸ ತುಂಬಿದ್ದು ನೀರು ಹರಿಯದಂತೆ ಲಾಕ್ ಆಗಿತ್ತು. 'ಹೊ ಇದು ನನ್ನ ಕೈಲೇ ಆಗೊ ಕೆಲಸ' ಎಂದು ಮೇಷ್ಟ್ರು ಕಡ್ಡಿ ತೆಗೆದುಕೊಂಡು ಅಲ್ಲಾಡಿಸಿ ತೆಗೆದರು. ನೀರು ಸರಾಗವಾಗಿ ನುಗ್ಗಿತು. ಪಾಪ ಮೇಷ್ಟ್ರಿಗೆ ಇದನ್ನೆಲ್ಲ ನೋಡ್ಕಣದು ಅಂಥ ದೊಡ್ಡ ವಿಷ್ಯ ಏನು ಆಗಿರ್‍ಲಿಲ್ಲ. ಆದ್ರೆ ಈಗ ಅವ್ರು ಏಕೋಪಾಧ್ಯಾಯ ಶಾಲೆಯ ಮುಖ್ಯೋಪಾಧ್ಯಾಯರಾಗಿರೋದ್ರಿಂದ ಕೆಲಸದ ಒತ್ತಡ ಜಾಸ್ತಿ, ಇಲಾಖೆ ಕೇಳುವ ಆ ದಾಖಲೆ ಈ ದಾಖಲೆ ಒದಗಿಸಿಕೊಟ್ಟು ಇತ್ತೀಚೆಗೆ ಬೀಪಿ ಸುಗರ್‍ನ ಬರಿಸಿಕೊಂಡಿದ್ದರು.

ಟಾಯ್ಲೆಟ್ ರೂಮೊಳಗೆ ಇಳಿದ ಮೇಷ್ಟ್ರು, ನಲ್ಲಿ ತಿರುಗಿಸಿ ಬಕೆಟ್ ತುಂಬಿಸಲು ಹೋದಾಗ ಟ್ಯಾಪ್ ಮುರಿದು ಬಿದ್ದು, ನೀರು ಒಮ್ಮೆಲೆ ಜಿಗಿದು ಮೇಷ್ಟ್ರ ಬಟ್ಟೆಯನ್ನೆಲ್ಲ ನೆನಸಿ ಹಾಕಿತು. 'ತೊ ಇಂಗಾತಲ್ಲ' ಎಂದು ಮೇಷ್ಟ್ರು ಇಷ್ಟೆ ಆಗ್ಯೆತೆ ಇನ್ನೇನ್ಯೆತೆ ಎಂದು ತಮ್ಮ ಅಂಗಿಯನ್ನು ಬಿಚ್ಚಿ, ಆಚೆಯಿದ್ದ ಮರದ ಸಂದಿಗೆ ಸಿಗಿಸಿ ಪ್ಯಾಂಟ್ ಅನ್ನು ಮೇಲಕ್ಕೆ ಮಡುಚಿಕೊಂಡು ಕಸಪೊರಕೆ ಬಕೆಟ್ಟು ಚೊಂಬಿನ ಸಹಾಯದಿಂದ ತೊಳೆಯಲು ಮುಂದಾದರು. ನನ್ನ ಈ ಸ್ಥಿತಿಯನ್ನ ಮನೆಯಲ್ಲಿರುವ ಹೆಂಡ್ತಿ ಮತ್ತವರ ತವರಿನವರೇನಾದರೂ ನೋಡಿಬಿಟ್ಟರೆ ನಾನು ಮೇಷ್ಟ್ರೆಂಬ ಗತ್ತು ಮಣ್ಣು ಪಾಲಾಗುತ್ತಲ್ಲ ಎಂಬ ಆತಂಕ ಸುಳಿದು ಹೋದದ್ದು ಸುಳ್ಳಲ್ಲ. ಈ ಚಿಂತನೆಯ ಜೊತೆ ಜೊತೆಯಲ್ಲೆ ಉದ್ದನೆಯ ಗರಿಕಟ್ಟಿರುವ ಕೋಲೊಂದನ್ನ ಮಾನಿಟರ್‌ನಿಂದ ತರಿಸಿ ಮೇಲಿದ್ದ ಸೆಲೆಬೆಯನ್ನೆಲ್ಲ ತೆಗೆದರು. ಆ ನಂತರ ಇನ್ನೊಮ್ಮೆ ಉಜ್ಜಿ ನೀರುಯ್ದರು.

ಸಮಾಧಾನವಾಗದೆ ಇದ್ದಾಗ ಆಫೀಸ್ ರೂಮ್ ಶೆಲ್ಫಿನಲ್ಲಿದ್ದ ಪೆನಾಯಿಲ್, ಹಾರ್ಪಿಕ್ ತರಿಸಿ ಹಾಕಿ ಸ್ವಲ್ಪ ಹೊತ್ತು ಬಿಟ್ಟು ಇನ್ನೊಮ್ಮೆ ಉಜ್ಜಿದರು. ಅಂತೂ ಅಂದು ಟಾಯ್ಲೆಟ್ ರೂಮ್ ಫಳ ಫಳ ಹೊಳೆಯುವಂತಾಯಿತು. ಹೊಸ ಡೆಟಾಲ್ ಸೋಪನ್ನು ಇರಿಸಿ, ಮಕ್ಕಳು ನೋಡಿಕೊಳ್ಳಲು ಕನ್ನಡಿ ಸಿಗಿಸಿ, ಕೈಒರೆಸಿಕೊಳ್ಳಲು ಟವಲ್ ಅನ್ನೂ ನೇತಾಕಿ ತಿಮ್ಮಪ್ಪ ಮೇಷ್ಟ್ರು ಅಂತಿಮವಾಗಿ ಟಾಯ್ಲೆಟ್ ರೂಮಿನಿಂದ ಹೊರಬಂದರು.

ಹೊತ್ತಿಗೆ ಮುಂಚೆ ಬಂದ ಮೇಷ್ಟ್ರು ಇಂದು ಇಷ್ಟೆಲ್ಲ ಕ್ರಮಕೈಗೊಳ್ಳಬೇಕೆಂದರೆ ತಾಲೂಕಿಗೆ ಹೊಸದಾಗಿ ಬಂದಿದ್ದ ಸಾಹೇಬ್ರು ಕಳೆದ ವಾರವಷ್ಟೆ ಡ್ಯೂಟಿ ರಿಪೋರ್ಟ್ ಮಾಡಿಕೊಂಡಿದ್ದರು. ಹತ್ತಾರು ವರ್ಷ ಕೋಸ್ಟಲ್ ಏರಿಯಾದಲ್ಲಿ ಸೇವೆ ಸಲ್ಲಿಸಿದ್ದ ಸಾಹೇಬ್ರು, ಈಗಷ್ಟೆ ಅದೇನೇನೊ ವ್ಯವಹಾರ ಕುದ್ರಿಸಿಕೊಂಡು ತವರು ಜಿಲ್ಲೆಗೆ ಬಂದಿದ್ರು. ಬಂದ ಹೊಸದಲ್ಲವೆ.. ಇವರ ಹವಾ ಎಲ್ಲಾ ಕಡೆಯೂ ಜೋರಾಗಿತ್ತು. 'ಹೆ ಸಾಹೇಬ್ರು ಬಂದವರೆ ಬೇರೆ ಏನೂ ನೋಡಲ್ವಂತೆ, ಸೀದ ಹೋಗಿ ಟಾಯ್ಲೆಟ್ ರೂಮ್ ಚೆಕ್ ಮಾಡ್ತರಂತೆ, ಅದೇನಾರ ನೀಟಾಗಿ ಇಲ್ಲ ಅಂದ್ರೆ ಅವ್ರೆ ಪರ್‍ಕೆ ತಗಂಡು ನಿಂತ್ಕಂತರಂತೆ, ಅದ್ನೆಲ್ಲ ಕ್ಲೀನ್ ಮಾಡಿ ಬಂದು ಆಮೇಲೆ ಅಮಾನತ್ತಿಗೆ ಬರಿತರಂತೆ' ಎಂಬಿತ್ಯಾದಿಯಾಗಿ ಸುದ್ದಿ ಹರಡಿಕೊಂಡಿತ್ತು. ಅದಕ್ಕೆ ತಕ್ಕನಾಗಿ ಶಿಕ್ಷಕರ ವಾಟ್ಸಾಪ್